ದಿ: 17-12-2025ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು</u>**: 4ನೇ ಪ್ರತಿವಾದಿ ಪರ ಶ್ರೀಯುತ ಡಿ.ಜಿ ವಕೀಲರಿಂದ.

5. ನನಗೆ ಪ್ರಸ್ತುತ 39 ವರ್ಷ ಪ್ರಾಯವಿರುತ್ತದೆ. ನಾನು ದಾವಾ ಆಸ್ತಿ ಮರುಮಂಜೂರಾತಿ ಮಾಡಿದ ಸಮಯದಲ್ಲಿ ಹುಟ್ಟಿರಲಿಲ್ಲ ಎಂದರೆ ಸರಿ. ಆ ರೀತಿ ದಾವಾ ಆಸ್ತಿ ಮರುಮಂಜೂರಾತಿ ಮಾಡಿದ ಸಮಯದಲ್ಲಿ ನಾನು ಹುಟ್ಟಿರದ ಮೇರೆಗೆ ಮಂಜೂರಾತಿ ಕುರಿತಾದ ವಿಚಾರಗಳು ನನಗೆ ತಿಳಿದಿರಲಿಲ್ಲ ಎಂದರೆ ಸರಿ. ಬಾಸ್ಕರ್ ರೆಡ್ಡಿ ಎನ್ನುವವರು ಸರ್ವೆ ನಂ.147/ಪಿ೧ ವಿಸ್ತೀರ್ಣ 23 ಗುಂಟೆ ಜಮೀನಿನ ಖರೀದಿದಾರರು ಎಂದರೆ ಸಾಕ್ಷಿಯು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಿಪಿ.5 ಪ್ರಕರಣದಲ್ಲಿ ನಾವು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ. ನಿಪಿ.5 ಪ್ರಕರಣದ ಚಾಲ್ತಿ ಇದ್ದ ಕುರಿತು ತಿಳಿದಿತ್ತು ಮತ್ತು ಸದರಿ ಪ್ರಕರಣವನ್ನು ನಾನೇ ನಡೆಸಿರುತ್ತೇನೆ. 2006ನೇ ಸಾಲಿನಲ್ಲಿ ಬಾಸ್ಕರ್ ರೆಡ್ಡಿ ರವರು ಸರ್ವೆ ನಂ.147/ಪಿ1 ಹೊಸ ಸಂಖ್ಯೆ 147/7 ವಿಸ್ತೀರ್ಣ 23 ಗುಂಟೆ ಜಮೀನ್ನನ್ನು ಖರೀದಿ ಪತ್ರದ ಮೇರೆಗೆ ಖಾತೆ ಮಾಡಲು ಅರ್ಜಿ ಸಲ್ಲಿಸಿದಾಗ ನಾನು ಸ್ವತ: ತಕರಾರು ಸಲ್ಲಿಸಿರುತ್ತೇವೆ ಎಂದರೆ ಸಾಕ್ಷಿಯು ನಾನು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತ: ಮುಂದುವರೆದು ನಾವು ಪೌಹತಿ ಖಾತೆ ಮಾಡಿಕೊಳ್ಳಲು ಹೋದಾಗ ಬಾಸ್ಕರ್ ರೆಡ್ಡಿರವರು ತಕರಾರು ಸಲ್ಲಿಸಿರುತ್ತಾರೆ.

6. ನಾನು ನಿಪಿ.5 ಪ್ರಕರಣದಲ್ಲಿ ಮುನಿನಾರಾಯಣಪ್ಪರವರು ಮೃತಪಟ್ಟಿರುತ್ತಾರೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.5 ಕಂದಾಯ ನ್ಯಾಯಾಲಯದ ಆದೇಶ ಪ್ರತಿ ಎಂದರೆ ಸರಿ. ನಿಪಿ.5 ಪ್ರಕರಣದಲ್ಲಿ ನನ್ನ ಹೇಳಿಕೆಯಂತೆ ಆದೇಶ ಮಾಡಲಾಗಿರುತ್ತದೆ ಎಂದರೆ ಸರಿ. ದಿ: 12.12.1995 ರಂದು ನಾರಾಯಣಪ್ಪ ಮತ್ತು ಇತರರು ತಮ್ಮ ಭಾಗದ ಜಮೀನ್ನನ್ನು ಸೈಯದ್ ಅಮೀರ್ ಖಾನ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆ ನನ್ನ ತಂದೆ ಮತ್ತು ಅವರ ಸಹೋದರರು ಸೈಯದ್ ಅಮೀರ್ ಖಾನ್ ರವರಿಗೆ ಬರೆದುಕೊಟ್ಟ ಕ್ರಯ ಪತ್ರ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾಖಲೆಯಲ್ಲಿ ಮುನಿತಾಯಪ್ಪರವರ ಹಿಸ್ಸೆಯ ಜಮೀನ್ನನ್ನು ಮಾತ್ರ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.43 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆ ದಿ: 12.12.1995 ರಂದು ನಾರಾಯಣಪ್ಪ , ಯರಪ್ಪ ಮತ್ತು ಇತರರು ಅಮೀರ್ ಖಾನ್ ರವರಿಗೆ ಬರೆದುಕೊಟ್ಟ ಕ್ರಯ ಪತ್ರ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಕ್ರಯ ಪತ್ರದ ಕುರಿತು ದಾವೆ ತನಿಖೆಗೆ ಬಾಕಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.44 ಎಂದು ಗುರುತಿಸಲಾಯಿತು. ಸದರಿ ನಿ.ಡಿ.44 ಕ್ರಯ ಪತ್ರದ ಕುರಿತು ಬಾಕಿ ಇದೆ ಎಂದು ಹೇಳುವ ಪ್ರಕರಣದ ಕ್ರಮ ಸಂಖ್ಯೆ ಓ.ಎಸ್.109/2019 ಇರುತ್ತದೆ. ೧ನೇ ಪ್ರತಿವಾದಿಯು ಮಾರಾಟ ಮಾಡಿರುವ ಅವರ ಹಿಸ್ಸೆಯ ಕುರಿತಾದ ಎಲ್ಲಾ ಜಮೀನುಗಳ ಮೇಲೆ ದಾವೆಗಳನ್ನು ಮಾಡಲಾಗಿರುತ್ತದೆ. ೧ ಮತ್ತು 2ನೇ ವಾದಿಗಳು ಯಾವುದೇ ನ್ಯಾಯಾಲಯದಲ್ಲಿ ಹಾಜರಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ೧ ಮತ್ತು ೨ನೇ ವಾದಿಗೆ ಬಹಳ ಪ್ರಾಯವಾಗಿರುತ್ತದೆ ಎಂದು ನುಡಿಯುತ್ತಾರೆ. ೧ ಮತ್ತು ೨ನೇ ವಾದಿಗಳು ಆರೋಗ್ಯವಾಗಿದ್ದು ಮತ್ತು ಅವರುಗಳು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ಸತ್ಯಾಂಶ ತಿಳಿದು ಬರುತ್ತದೆ ಎನ್ನುವ ಸಲುವಾಗಿ ಅವರುಗಳನ್ನು ನ್ಯಾಯಾಲಯಕ್ಕೆ ಬರಲು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

7. ಈಗ ನನಗೆ ತೋರಿಸಿದ ದಾಖಲೆಯಲ್ಲಿ ೧ ಮತ್ತು ೨ನೇ ವಾದಿಗಳು ಹಾಗೂ ಮುನಿಯಪ್ಪರವರು ಜಂಟಿಯಾಗಿ ಬರೆದುಕೊಟ್ಟ ಸಾಮಾನ್ಯ ಮುಖ್ತಾರ ನಾಮೆ ಆಗಿದ್ದು ಮತ್ತು ಸದರಿ ದಾಖಲೆಯಲ್ಲಿ ಅವರುಗಳು ಮುನಿತಾಯಪ್ಪರವರ ಮಕ್ಕಳು ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆಯು ವಾಯು ಮುನಿತಾಯಪ್ಪರವರ ಮಕ್ಕಳು ಬರೆದುಕೊಟ್ಟ ಸಾಮಾನ್ಯ ಮುಖ್ತಾರ ನಾಮೆ ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.45 ಎಂದು ಗುರುತಿಸಲಾಯಿತು. ಸಾಕ್ಷಿ ಸ್ವತ: ಮುಂದುವರೆದು ಸದರಿ ವಾಯು ಮುನಿತಾಯಪ್ಪರವರಿಗೆ ಯಾನೆ ಮುನಿತಾಯಪ್ಪ ಎಂದು ಮತ್ತೊಂದು ಹೆಸರು ಇರುತ್ತದೆ ಎಂದು ನುಡಿಯುತ್ತಾರೆ. ನಮಗೆ ಮತ್ತು ದಾವಾ ಆಸ್ತಿಗೆ ಯಾವುದೇ ಸಂಬಂಧ ಇರುವುದಿಲ್ಲ ಮತ್ತು ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರದ ಮೇರೆಗೆ 1 ಮತ್ತು 2ನೇ ವಾದಿಗಳು ಸ್ವತ: ಯಾವುದೇ ದಾವೆಗಳನ್ನು ದಾಖಲಿಸಿರುವುದಿಲ್ಲ ಮತ್ತು ನಾನು ಸಾಮಾನ್ಯ ಮುಖ್ತಾರ ನಾಮೆ ಪಡೆದುಕೊಂಡು ಅವರಿಗೆ ತಿಳಿಯದ ರೀತಿಯಲ್ಲಿ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.